ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯ, ಶಿವಮೊಗ್ಗ
ಭಾರತೀಯ ಕೃಷಿ ಅನುಸಂದಾನ ಪರಿಷತ್, ನವದೆಹಲಿ
ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರ, ಉಡುಪಿ - 576 213

ಕರಾವಳಿ ಕೃಷಿ

ತ್ರೈಮಾಸಿಕ ಕೃಷಿಕರ ವಾರ್ತಾ ಪತ್ರಿಕೆ

ಏಪ್ರಿಲ್ - ಜೂನ್ 2020 ಸಂಪುಟ-10, ಸಂಚಿಕೆ-1

ರೈತರಿಂದ ನೇರ ಮಾರಾಟ

ಕೋವಿಡ್-19 ಸಾಂಕ್ರಾಮಿಕ ರೋಗ ಹರಡುವ ಭೀತಿಯಿಂದ ದೇಶ ಲಾಕ್ ಡಾನ್ ಆದದ್ದರಿಂದ ರೈತರು ಬೆಳೆದ ಬೆಳೆಯನ್ನು ಮಾರುಕಟ್ಟೆ ಮಾಡಲಾಗದೆ ಆತಂಕಗೊಳಗಾಗಿರುವ ರೈತರಿಗೆ ಧೈರ್ಯ ತುಂಬುವ ಕೆಲಸದ ಜೊತೆಗೆ ಬೇರೆ ಬೇರೆ ಮೂಲಗಳಿಂದ ಮಾರುಕಟ್ಟೆಯ ಸಂಪರ್ಕವನ್ನು ಕಲ್ಪಿಸಿಕೊಡುವ ಕೆಲಸವನ್ನು ಕೃಷಿ ವಿಜ್ಞಾನ ಕೇಂದ್ರ ಬ್ರಹ್ಮಾವರದ ವತಿಯಿಂದ ಮಾಡಲಾಗಿದೆ. ಈ ರೀತಿಯಾಗಿ ಸಾಮಾಜಿಕ ಜಾಲತಾಣದ ಮುಖಾಂತರ ರೈತ ತನ್ನ ಜಮೀನಿನಲ್ಲಿ ನೇರ ಬಳಕೆದಾರರಿಗೆ ಮಾರಾಟ ಮಾಡುವ ಹಾಗೆ ಕಲ್ಪಿಸಿ ಕೊಟ್ಟ ಉದಾಹರಣೆ ಶ್ರೀ ಸುರೇಶ್ ನಾಯಕ್ ಬೊಮ್ಮರಬೆಟ್ಟು ಹಿರಿಯಡ್ಕ ರವರದ್ದು. ಇವರು ತಮ್ಮ ಜಮೀನಿನಲ್ಲಿ ಬೆಳೆದ ಕಲ್ಲಂಗಡಿ ಹಣ್ಣಿಗೆ ಸೂಕ್ತ ಮಾರುಕಟ್ಟೆ ಸಿಗದೆ ಕಂಗಾಲಾಗಿದ್ದಾಗ ಕೃಷಿ ವಿಜ್ಞಾನ ಕೇಂದ್ರ ಬ್ರಹ್ಮಾವರ, ಸಾಮಾಜಿಕ ಜಾಲತಾಣದಲ್ಲಿ ಇವರು ಬೆಳೆದಂತಹ ಬೆಳೆಯ ಬಗ್ಗೆ ವಿವರ ನೀಡಿ ಮಾಹಿತಿಯನ್ನು ಹರಿ ಬಿಡಲಾಯಿತು. ಇದಕ್ಕೆ ಪ್ರತಿಕ್ರಿಯಿಸಿದ ರೈತರು ಮತ್ತು ಉಡುಪಿ ನಗರವಾಸಿಗಳು ನೇರವಾಗಿ ಸುರೇಶ್ ನಾಯಕ್ ಇವರ ಜಮೀನಿಗೆ ಖರೀದಿ ಮಾಡಿದರು. ಇದುವರೆಗೆ ಸುಮಾರು 200 ಟನ್ ಕಲ್ಲಂಗಡಿ ಹಣ್ಣಿನ ಜೊತೆಗೆ ವಿವಿಧ ತರಕಾರಿ, ಹಣ್ಣುಗಳನ್ನು ಬೇರೆ ಜಿಲ್ಲೆಯ ರೈತರಿಂದ ಖರೀದಿಸಿ ಸಗಟು ದರದಲ್ಲಿ ಮಾರಾಟ ಮಾಡುತ್ತಾರೆ. ಈ ರೀತಿಯಾಗಿ ಕೃಷಿ ವಿಜ್ಞಾನ ಕೇಂದ್ರದ ನೆರವಿನಿಂದ ಸೃಷ್ಟಿಯಾದ ಮಾರುಕಟ್ಟೆಯಿಂದ ಇತರ ಜಿಲ್ಲೆಯ ರೈತರಿಗೆ ನೆರವು ನೀಡಿದ್ದಾರೆ. ಉದಾಹರಣೆಗೆ ಚಿತ್ರದುರ್ಗ ಜಿಲ್ಲೆಯ ಕಾಟನಾಯಕನ ಹಳ್ಳಿಯ ರೈತ ಮಹಿಳೆ ವಸಂತಕುಮಾರಿ ಯವರಿಗೂ ಈ ನೆರವನ್ನು ನೀಡಿದ್ದಾರೆ. ವಸಂತ ಕುಮಾರಿಯವರು ಬೆಳೆದ 10 ಟನ್ ಈರುಳ್ಳಿ ಬೆಳೆಯನ್ನು ಮಾರಲಾಗದೆ ಕಂಗಾಲಾಗಿ, ತನ್ನ ಅಳಲನ್ನು ಸಾಮಾಜಿಕ ಜಾಲತಾಣದಲ್ಲಿ ಹಾಗೂ ಮುಖ್ಯಮಂತ್ರಿಗಳ ವೀಡಿಯೋ ಸಂದರ್ಶನದಲ್ಲಿ ತೋಡಿಕೊಂಡಾಗ, ಸಮಸ್ಯೆಯನ್ನು ಅರಿತ ಚಿತ್ರದುರ್ಗದ ತೋಟಗಾರಿಕೆ ಇಲಾಖೆಯ ಅಧಿಕಾರಿಗಳು, ಕೃಷಿ ವಿಜ್ಞಾನ ಕೇಂದ್ರವನ್ನು ಸಂಪರ್ಕಿಸಿದಾಗ, ಶ್ರೀ ಸುರೇಶ್ ನಾಯಕ್ ಇವರನ್ನು ಖರೀದಿ ಮಾಡುವಂತೆ ಕೇಳಿ ಕೊಳ್ಳಲಾಯಿತು. ಇದಕ್ಕೆ ಒಪ್ಪಿದ ಶ್ರೀ ಸುರೇಶ್ ನಾಯಕ್ 10ಟನ್ ಈರುಳ್ಳಿ ಖರೀದಿಸಿ ಸಂಕಷ್ಟದಲ್ಲಿ ಇದ್ದ ರೈತ ಮಹಿಳೆಗೆ ನೆರವು ನೀಡಿರುತ್ತಾರೆ. ಕೃಷಿ ವಿಜ್ಞಾನ ಕೇಂದ್ರದ ಮನವಿಗೆ ಸ್ಪಂದಿಸಿ ಕೋವಿಡ್-19 ರ ಮಹಾಮಾರಿಯಿಂದ ಮಾರುಕಟ್ಟೆ ಇಲ್ಲದ ಸಮಯದಲ್ಲಿ 10 ಟನ್ ಈರುಳ್ಳಿ ಖರೀದಿಸಿ ಮಾನವೀಯತೆ ಮೆರೆದಿರುತ್ತಾರೆ.

ಒಳಾಂಗಣ ತರಬೇತಿ ಕಾರ್ಯಕ್ರಮ
ಕರಾವಳಿ ಪ್ರದೇಶದಲ್ಲಿ ಭತ್ತ ಉತ್ಪಾದನಾ ತಂತ್ರಜ್ಞಾನಗಳು

ಐಸಿಎಆರ್-ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರ, ಉಡುಪಿ ಜಿಲ್ಲೆಯಲ್ಲಿ ದಿನಾಂಕ 22 ಮೇ 2020 ರಂದು, "ಕರಾವಳಿ ಪ್ರದೇಶದಲ್ಲಿ ಭತ್ತ ಉತ್ಪಾದನಾ ತಂತ್ರಜ್ಞಾನಗಳು" ಎಂಬ ವಿಷಯದ ಅಂತರ್ಜಾಲ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಡಾ. ನವೀನ್ ಎನ್.ಈ., ವಿಜ್ಞಾನಿಗಳು (ಬೇಸಾಯ ಶಾಸ್ತ್ರ) ರವರು ಸಂಪನ್ಮೂಲ ವ್ಯಕ್ತಿಯಾಗಿ, ಉಪಯುಕ್ತ ಹಾಗೂ ಬಹು ಮುಖ್ಯ ತಂತ್ರಜ್ಞಾನಗಳಾದ, ನಾಟಿಯ ಕಾಲ ಮತ್ತು ತಳಿಗಳ ಆಯ್ಕೆ, ಜಮೀನಿನ ಹದಗೊಳಿಸುವಿಕೆ, ಬೀಜದ ಆಯ್ಕೆ ಸಸಿಮಡಿಗಳ ತಯಾರಿ, ಬೇಸಾಯ ಕ್ರಮಗಳು, ಕಳೆ ನಿಯಂತ್ರಣ ಮತ್ತು ಇತರೆ ಉತ್ಪಾದನಾ ತಂತ್ರಜ್ಞಾನಗಳ ಕುರಿತಾಗಿ ರೈತರೊಂದಿಗೆ ಮಾಹಿತಿ ಹಂಚಿಕೊಂಡರು. 26 ರೈತರು ತರಬೇತಿಯಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಂಡರು.

ವಿಶ್ವ ಜೇನು ನೊಣ ದಿನಾಚರಣೆ

ವಿಶ್ವ ಜೇನು ನೊಣ ದಿನಾಚರಣೆಯನ್ನು ದಿನಾಂಕ 20.05.2020 ರಂದು ಐಸಿಎಆರ್ ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರದಲ್ಲಿ ಸಾಮಾಜಿಕ ಅಂತರದೊಂದಿಗೆ ಆಚರಿಸಲಾಯಿತು.

ಡಾ. ಎಸ್.ಯು.ಪಾಟೀಲ್, ಸಹಾಯಕ ವಿಸ್ತರಣಾ ನಿರ್ದೇಶಕರು, ವಲಯ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಬ್ರಹ್ಮಾವರ, ಇವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು ಹಾಗೂ ವಿಶ್ವ ಜೇನು ನೊಣ ದಿನಾಚರಣೆ ದಿನದ ಮಹತ್ವ ಮತ್ತು ಪ್ರಕೃತಿಯ ಸಮತೋಲನವನ್ನು ಕಾಪಾಡುವಲ್ಲಿ ಜೇನುಹುಳುಗಳ ಮಹತ್ವದ ಬಗ್ಗೆ ತಿಳಿಸಿದರು. ಡಾ. ಸುಧೀರ್ ಕಾಮತ್, ಪ್ರಾಂಶುಪಾಲರು, ಕೃಷಿ ಡಿಪ್ಲೋಮಾ ಕಾಲೇಜು ಬ್ರಹ್ಮಾವರ ಮತ್ತು ಡಾ.ಧನಂಜಯ ಬಿ, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಕೆ.ವಿ.ಕೆ, ಬ್ರಹ್ಮಾವರ ರವರು ಮುಖ್ಯ ಅತಿಥಿಗಳಾಗಿದ್ದು, ಜೇನುನೊಣಗಳ ಮಹತ್ವ ಮತ್ತು ಕೃಷಿ ಮತ್ತು ಆದಾಯ ಹೆಚ್ಚಿಸುವಲ್ಲಿ ಅವುಗಳ ಪಾತ್ರದ ಬಗ್ಗೆ ಸವಿಸ್ತಾರವಾಗಿ ವಿವರಣೆ ನೀಡಿದರು. ಕೃಷಿ ವಿಜ್ಞಾನ ಕೇಂದ್ರ,

ಅಡಿಕೆಯಲ್ಲಿ ಕೊಳೆರೋಗ ಬರಲು ಕಾರಣಗಳು

ಫೈಟೊಫ್ಥೆರಾ ಅರಕೆ ಎಂಬ ಶಿಲೀಂಧ್ರದಿಂದ ಕೊಳೆರೋಗ ಬರುತ್ತದೆ. ಕಳೆದ ಸಾಲಿನಲ್ಲಿ ಈ ಶಿಲೀಂದ್ರದ ಬಾಧೆಗೊಳಗಾದ ಅಡಿಕೆ ಭಾಗಗಳಲ್ಲಿ ಹಾಗೂ ಮಣ್ಣಿನಲ್ಲಿ ಸುಪ್ತಾವಸ್ಥೆಯಲ್ಲಿರುವ ಶಿಲೀಂದ್ರಗಳು, ಮಳೆ ಬೀಳುತ್ತಿದ್ದಂತೆ ಕ್ರಿಯಾಶೀಲಗೊಂಡು, ಹೆಚ್ಚಿನ ಸಂಖ್ಯೆಯಲ್ಲಿ ವಂಶಾಭಿವೃದ್ಧಿಗೊಂಡು ಅಡಿಕೆ ಬೆಳೆಯನ್ನು ಹಾನಿ ಮಾಡುತ್ತವೆ.

ಕೊಳೆರೋಗದ ಹಾನಿಯ ಲಕ್ಷಣಗಳು

- ಪ್ರಾರಂಭದಲ್ಲಿ ಕಾಯಿಗಳ ಮೇಲೆ ನೀರಿನಿಂದ ಒದ್ದೆಯಾದಂತಹ ಅಚ್ಚ ಹಸಿರು ಬಣ್ಣದ ಮಚ್ಚೆಗಳು ಕಾಣಿಸಿಕೊಂಡು, ಅಡಿಕೆ ಹೆಚ್ಚಿನ ಸಂಖ್ಯೆಯಲ್ಲಿ ಉದುರುವುವು.

- ಕ್ರಮೇಣ ಮಚ್ಚೆಗಳು ದೊಡ್ಡದಾಗಿ ಕಾಯಿಗಳ ಮೇಲ್ಭಾಗವನ್ನೆಲ್ಲಾ ಆವರಿಸಿ ಕಾಯಿಗಳು ಹೊಳಪು ಹಾಗೂ ತೂಕವನ್ನು ಕಳೆದುಕೊಂಡು ಕೊಳೆಯುವುವು ಮತ್ತು ಗೊಂಚಲಿನಲ್ಲಿ ಒಣಗುವವು.
- ಕೊಳೆತ ಕಾಯಿಗಳ ಮೇಲೆ ಬಿಳಿ ಬಣ್ಣದ ಶಿಲೀಂದ್ರದ (ಬೂಸ್ಟ್) ಬೆಳವಣಿಗೆ ಕಂಡು ಬರುವುದು. ರೋಗ ತೀವ್ರಗೊಂಡಾಗ ಗೊಂಚಲು ಕೊಳೆತು ಕಪ್ಪಾಗುವುದು.

ತೋಟಗಳಲ್ಲಿ ರೋಗ ಹರಡದಂತೆ ಹಾಗೂ ರೋಗ ಉಲ್ಬಣವಾಗದಂತೆ ವಹಿಸಬೇಕಾದ ಎಚ್ಚರಿಕೆ ಕ್ರಮಗಳು

- ಕೆಳಗೆ ಬಿದ್ದಿರುವ ರೋಗಪೀಡಿತ ಕಾಯಿ ಹಾಗೂ ಒಣಗಿದ ಸಿಂಗಾರುಗಳನ್ನು ಆರಿಸಿ ತೆಗೆದು ಸುಡಬೇಕು ಅಥವಾ ಗುಂಡಿಗಳಲ್ಲಿ ಹಾಕಿ ಮಣ್ಣಿನಿಂದ ಮುಚ್ಚಬೇಕು.
- ಮುಂಗಾರಿಗೆ ಮುಂಚೆ ಅಡಿಕೆ ಗೊಂಚಲುಗಳನ್ನು ಪ್ಲಾಸ್ಟಿಕ್ ಹಾಳೆಗಳಿಂದ (ಫಾಲಿಥೀನ್ ಕವರ್) ಮುಚ್ಚಿ ಈ ರೋಗವನ್ನು ತಡೆಯಬಹುದು.
- ತೋಟಗಳಲ್ಲಿ ಜಾಸ್ತಿ ನೀರು ನಿಲ್ಲದಂತೆ ಬಸಿಗಾಲುವೆ ತೆಗೆದು ನೀರು ಹರಿದು ಹೋಗಲು ವ್ಯವಸ್ಥೆ ಮಾಡಬೇಕು.
- ತೋಟಗಳಲ್ಲಿ ಕಳೆ ತೆಗೆದು ಸ್ವಚ್ಛತೆ ಕಾಪಾಡಿಕೊಳ್ಳಬೇಕು. ಗಾಳಿಯಾಡುವಂತೆ ಮಾಡಲು ಅಂತರ ಬೆಳೆಗಳ ಅಥವಾ ಕಾಡು ಮರಗಳ ಹೆಚ್ಚುವರಿ ರೆಂಬೆಗಳನ್ನು ಕತ್ತರಿಸಿ ತೆಗೆಯಬೇಕು.
- ತೋಟದಲ್ಲಿ ಅಲ್ಲಲ್ಲಿ (ಎಕರೆಗೆ 3-4 ಕಡೆ) ಅಡಿಕೆ ಸಿಪ್ಪೆ, ಭತ್ತದ ಹೊಟ್ಟು ಹಾಗೂ ಇತರೆ ತ್ಯಾಜ್ಯ ವಸ್ತುಗಳನ್ನು ಬಳಸಿ ಹೊಗೆ ಹಾಕಬೇಕು. ಇದರಿಂದ ಉಷ್ಣತೆ ಹೆಚ್ಚಿ ಶಿಲೀಂದ್ರದ ಬೆಳವಣಿಗೆ ಕಡಿಮೆಯಾಗುವುದು.
- ಅಡಿಕೆ ತೋಟದಲ್ಲಿ ಮಣ್ಣಿನ ಪರೀಕ್ಷೆ ಮಾಡಿಸಿ, ಶಿಫಾರಸ್ಸಿನ ಮೇರೆಗೆ ಪೋಷಕಾಂಶಗಳನ್ನು ನೀಡಿ ಮರದ ಆರೋಗ್ಯವನ್ನು ಕಾಪಾಡಿಕೊಡರೆ, ಮರಗಳಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಾಗುತ್ತದೆ.
- ಮುಂಗಾರಿನ ಪ್ರಾರಂಭದಲ್ಲಿ ಅಂದರೆ ಮೇ ತಿಂಗಳ ಕೊನೆಯಲ್ಲಿ ಅಡಿಕೆ ಗೊನೆಗಳಿಗೆ, ಎಲೆಯ ತೊಟ್ಟು, ಸಿಂಗಾರ ಮತ್ತು ಸುಳಿ ಭಾಗಗಳು ಚೆನ್ನಾಗಿ ನೆನೆಯುವಂತೆ ಶೇ. 1ರ ಬೋರ್ಡೋ ದ್ರಾವಣವನ್ನು ಅಥವಾ ಶೇ 0.3 ರ ತಾಮ್ರದ ಆಕ್ಸಿಕ್ಲೋರೈಡ್ (3 ಗ್ರಾಂ 1 ಲೀ ನೀರಿನಲ್ಲಿ ಕರಗಿಸಿ) ಸೂಕ್ತ ಅಂಟಿನೊಂದಿಗೆ (ರಾಳ) ಬೆರೆಸಿ ಸಿಂಪರಣೆ ಮಾಡಿದರೆ ಮುಂದೆ ಬರುವ ಕೊಳೆರೋಗವನ್ನು ಸಾಕಷ್ಟು ಪ್ರಮಾಣದಲ್ಲಿ ತಡೆಗಟ್ಟಬಹುದು.
- ಮಳೆ ಪ್ರಾರಂಭವಾದ ನಂತರ ಅಡಿಕೆ ತೋಟವನ್ನು ಆಗಾಗ ಪರೀಕ್ಷಿಸಿ, ಕೊಳೆ ರೋಗ ತೋಟದಲ್ಲಿ ಕಾಣಿಸಿಕೊಂಡರೆ ಈ ಮೇಲಿನ ರಾಸಾಯನಿಕದಿಂದ ಒಂದು ಸಿಂಪರಣೆಯನ್ನು ರೋಗದ ಪ್ರಾರಂಭದ ಹಂತದಲ್ಲಿ ಕೊಡಬೇಕು. ರೋಗದ ಉಲ್ಬಣತೆಯನ್ನು ನೋಡಿ ಮುಂದಿನ ಸಿಂಪರಣೆ ಬೇಕೋ ಬೇಡವೋ ಎಂದು ನಿರ್ಧರಿಸಬೇಕು.
- ಕೊಳೆರೋಗದ ತೀವ್ರತೆಯನ್ನು ಅನುಸರಿಸಿ 30-45 ದಿನಗಳಲ್ಲಿ ಎರಡನೇ ಸಿಂಪರಣೆಯನ್ನು ಕೊಡಬೇಕು. ಮಳೆಗಾಲ ಮುಂದುವರೆದರೆ 3 ನೇ ಸಿಂಪರಣೆ ಅಗತ್ಯ.
- ಶಿಲೀಂದ್ರನಾಶಕ ಸಿಂಪರಣೆ ಮಾಡುವಾಗ ಬೇರುಗಳ ಬುಡದಲ್ಲಿ ಪ್ರತಿ ಮರಕ್ಕೆ 1.5-2 ಲೀಟರ್ ನಂತೆ ಶೇ.1 ರ ಬೋರ್ಡೋ ದ್ರಾವಣವನ್ನು ಮರದ ಬುಡದ ಸುತ್ತ ಸಿಂಪಡಿಸಬೇಕು. ಇದರಿಂದ ಬುಡದಲ್ಲಿರುವ ಶಿಲೀಂದ್ರವನ್ನು ಹಾಗೂ ಶಿಲೀಂದ್ರದ ಬೆಳವಣಿಗೆಯನ್ನು ನಿಯಂತ್ರಿಸಬಹುದು.
- ಶೇ. 1 ರ ಬೋರ್ಡೋ ದ್ರಾವಣ ಕೊಳೆರೋಗದ ಹತೋಟಿಯಲ್ಲಿ ಉತ್ತಮವಾದ ಶಿಲೀಂದ್ರನಾಶಕವಾಗಿದ್ದು ರೈತರು ವೈಜ್ಞಾನಿಕವಾಗಿ ತಯಾರಿಸಿ ಸಿಂಪಡಿಸಿದರೆ ಕೊಳೆರೋಗವನ್ನು ಪರಿಣಾಮಕಾರಿಯಾಗಿ ಹತೋಟಿ ಮಾಡಬಹುದು.

ಶೇಕಡಾ 1 ರ ಬೋರ್ಡೋ ದ್ರಾವಣ ತಯಾರಿಸುವ ವಿಧಾನ ಮತ್ತು ಅದರ ಬಳಕೆ

- ✓ ಒಂದು ಪಾತ್ರೆಯಲ್ಲಿ ಒಂದು ಕಿ.ಗ್ರಾಂ ಮೈಲುತುತ್ತು (ತಾಮ್ರದ ಸಲ್ಫೇಟ್) ವನ್ನು 50 ಲೀ ನೀರಿನಲ್ಲಿ ಚೆನ್ನಾಗಿ ಕರಗಿಸಬೇಕು.
- ✓ ಇನ್ನೊಂದು ಪಾತ್ರೆಯಲ್ಲಿ ಒಂದು ಕಿ.ಗ್ರಾಂ ಸುಣ್ಣವನ್ನು 50 ಲೀ ನೀರಿನಲ್ಲಿ ಚೆನ್ನಾಗಿ ಕರಗಿಸಿ ಬೆರೆಸಬೇಕು ಮತ್ತು ಇದರ ಜೊತೆಯಲ್ಲಿ 150 ಗ್ರಾಂ ನಪ್ಪು ಅಂಟನ್ನು ಮಿಶ್ರ ಮಾಡಬೇಕು.
- ✓ ಎರಡು ದ್ರಾವಣವನ್ನು ಒಂದೇ ಸಾರಿ ಮೂರನೆ ಪಾತ್ರೆಗೆ ಸುರಿಯುತ್ತ ಕಲಕಿ ಮಿಶ್ರಣ ಮಾಡಬೇಕು.
- ✓ ಬೋರ್ಡೋ ದ್ರಾವಣದ ರಸಸಾರ (ಪಿ.ಹೆಚ್) 7 ಇರಬೇಕು.
- ✓ ಕಡಿಮೆಯಾಗಿದ್ದರೆ ಸಸ್ಯಗಳಿಗೆ ಹಾನಿಯಾಗುವುದು.
- ✓ ರಸಸಾರ ಪರೀಕ್ಷಿಸಲು ದ್ರಾವಣದಲ್ಲಿ ಕಬ್ಬಿಣದ ಬ್ಲೇಡನ್ನು ಅಥವಾ ಚಾಕುವನ್ನು ಸುಮಾರು 5-10 ನಿಮಿಷ ಅದ್ದಿ ನೋಡಬೇಕು. ರಸಸಾರ ಸರಿ ಇಲ್ಲದಿದ್ದರೆ ಬ್ಲೇಡ ಅಥವಾ ಚಾಕು ಕೆಂಪು ಮಿಶ್ರಿತ ಕಂದು ಬಣ್ಣವಾಗುವುದು. ರಸಸಾರ ಸರಿಪಡಿಸಿ ತಟಸ್ಥ ರಸಸಾರ (ಪಿ.ಹೆಚ್ 7) ಕ್ಕೆ ತರಲು ಸ್ವಲ್ಪ ಸ್ವಲ್ಪ ಸುಣ್ಣದ ದ್ರಾವಣವನ್ನು ಸೇರಿಸಿ ಬೆರೆಸಬೇಕು.
- ✓ ಈ ರೀತಿಯಾಗಿ ಮಾಡಿ ದ್ರಾವಣದ ರಸಸಾರ ತಟಸ್ಥವಾಗುವ ಹಾಗೆ ನೋಡಿಕೊಳ್ಳಬೇಕು.

ಸಂಪಾದಕರು: ಡಾ. ಬಿ. ಧನಂಜಯ
ಸಹ ಸಂಪಾದಕರು: ಶ್ರೀ ಚೈತನ್ಯ ಹೆಚ್. ಎಸ್., ಡಾ. ಎನ್. ಈ. ನವೀನ್, ಡಾ. ಜಯ ಪ್ರಕಾಶ್ ಆರ್., ಶ್ರೀ ಶ್ರೀನಿವಾಸ ಹೆಚ್. ಹುಲಕೋಟಿ, ಡಾ. ಸಚಿನ್ ಯು. ಎಸ್.
ಅಕ್ಷರ ಜೋಡಣೆ : ಶ್ರೀಮತಿ ಶೈಲಜ ಮತ್ತು ಶ್ರೀಮತಿ ಸುಷ್ಮಾ
ಪ್ರಕಾಶಕರು: ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರ, ಉಡುಪಿ-576213
ದೂರವಾಣಿ ಸಂಖ್ಯೆ: 0820-2563923, Email: kvkudupi@gmail.com, Website: kvkud.uahs.edu.in

ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯ, ಶಿವಮೊಗ್ಗ
ಭಾರತೀಯ ಕೃಷಿ ಅನುಸಂದಾನ ಪರಿಷತ್, ನವದೆಹಲಿ
ಭಾ. ಕೃ. ಅ. ಪ - ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರ, ಉಡುಪಿ - 576 213

ಕರಾವಳಿ ಕೃಷಿ

ತ್ರೈಮಾಸಿಕ ಕೃಷಿಕರ ವಾರ್ತಾ ಪತ್ರಿಕೆ

ಜುಲೈ - ಸೆಪ್ಟೆಂಬರ್ 2020 ಸಂಪುಟ-10 , ಸಂಚಿಕೆ-2

ಪೌಷ್ಟಿಕ ಕೈತೋಟ ಮತ್ತು ಎರೆಗೊಬ್ಬರ ತಯಾರಿ ತರಬೇತಿ ಕಾರ್ಯಕ್ರಮ

ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯ ಶಿವಮೊಗ್ಗ, ಭಾರತೀಯ ಕೃಷಿ ಅನುಸಂದಾನ ಪರಿಷತ್ ನವದೆಹಲಿ, ಐ ಸಿ ಎ ಆರ್ ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರ ಮತ್ತು ಸಮೃದ್ಧಿ ಮಹಿಳಾ ಮಂಡಳಿ ಪೇತ್ರಿ ಇವರ ಸಂಯುಕ್ತ ಆಶ್ರಯದಲ್ಲಿ ದಿನಾಂಕ 1-07-2020 ರಂದು ಪೇತ್ರಿ ಗ್ರಾಮದ ಶ್ರೀ ಪ್ರಸಾದ್ ಭಟ್ ಅವರ ಮನೆಯ ವಠಾರದಲ್ಲಿ ಪೌಷ್ಟಿಕ ಕೈತೋಟ ಮತ್ತು ಎರೆಗೊಬ್ಬರ ತಯಾರಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕೆ.ವಿ.ಕೆ. ಬ್ರಹ್ಮಾವರದ ತೋಟಗಾರಿಕೆ ವಿಜ್ಞಾನಿಗಳಾದ ಶ್ರೀ ಚೈತನ್ಯ ಎಚ್. ಎಸ್. ಪೌಷ್ಟಿಕ ಕೈತೋಟ ಕೈಗೊಳ್ಳುವ ರೈತ ಮಹಿಳೆಯರಿಂದ ತಮ್ಮ ಮನೆಯ ವಿವರ, ಅವರ ನಿತ್ಯ ಬಳಕೆಯಲ್ಲಿರುವ ಆಹಾರ ಪದ್ಧತಿ ಮತ್ತು ಪೋಷಕಾಂಶಗಳ ನ್ಯೂನ್ಯತೆ ಕುರಿತು ಮಾಹಿತಿಯನ್ನು ಪಡೆದುಕೊಂಡರು. ಕಾರ್ಯಕ್ರಮದಲ್ಲಿ ಮುಂಗಾರಿಗೆ ಕೈತೋಟ ಮಾಡುವುದರ ಬಗ್ಗೆ ಚರ್ಚಿಸಲಾಯಿತು. ಕೆ.ವಿ.ಕೆ. ಬ್ರಹ್ಮಾವರದ ಬೇಸಾಯ ಶಾಸ್ತ್ರ ವಿಜ್ಞಾನಿಗಳಾದ ಡಾ. ನವೀನ್ ಎನ್.ಈ. ಮನೆ ಮತ್ತು ಕೃಷಿ ತ್ಯಾಜ್ಯ ಬಳಸಿ ಅದರಿಂದ ಎರೆಗೊಬ್ಬರ ತಯಾರಿಸುವ ಬಗ್ಗೆ ಪದ್ಧತಿ ಪ್ರಾತ್ಯಕ್ಷಿಕೆ ಮೂಲಕ ಶಿಬಿರಾರ್ಥಿಗಳಿಗೆ ಮನದಟ್ಟು ಮಾಡಿದರು. ಡಾ ಧನಂಜಯ ಬಿ. ಕೆ.ವಿ.ಕೆ. ಬ್ರಹ್ಮಾವರದ ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು ಕಾರ್ಯಕ್ರಮದ ಬಗ್ಗೆ ಪ್ರಾಸ್ತವಿಸಿದರು. ಸಮೃದ್ಧಿ ಮಹಿಳಾ ಮಂಡಳಿ ಪೇತ್ರಿ ಇದರ ಅಧ್ಯಕ್ಷರಾದ ಶ್ರೀಮತಿ ಪ್ರಸನ್ನ ಪಿ. ಭಟ್ ಸ್ವಾಗತಿಸಿದರು ಹಾಗೂ ಶ್ರೀ ಪ್ರಸಾದ್ ಭಟ್ ವಂದಿಸಿದರು. ಕೆ.ವಿ.ಕೆ ಬ್ರಹ್ಮಾವರದ ಕೀಟ ಶಾಸ್ತ್ರ ವಿಜ್ಞಾನಿಗಳಾದ ಡಾ. ಸಚಿನ್ ಯು. ಎಸ್. ಮತ್ತು ಪೌಷ್ಟಿಕ ಕೈತೋಟ ರಚಿಸುವ 25 ಫಲಾನುಭವಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೆ ಸಹಕರಿಸಿದರು.





ಕಾಳು ಮೆಣಸಿನಲ್ಲಿ ಶೀಘ್ರ ಸೊರಗು ರೋಗದ ನಿರ್ವಹಣೆ

ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರ ಇವರ ವತಿಯಿಂದ, ಸಂತೆಕಟ್ಟೆಯ ಸದಾನಂದ ನಾಯ್ಕರವರ ಮನೆಯ ವಠಾರದಲ್ಲಿ ದಿನಾಂಕ 24.07.2020 ರಂದು ನಡೆದ ಕಾಳು ಮೆಣಸಿನಲ್ಲಿ ಶೀಘ್ರ ಸೊರಗು ರೋಗದ ನಿರ್ವಹಣೆಯ ಮುಂಚೂಣಿ ಪ್ರಾತ್ಯಕ್ಷಿಕೆ ಕಾರ್ಯಕ್ರಮದಲ್ಲಿ ಕೇಂದ್ರದ ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರಾದ, ಡಾ. ಬಿ. ಧನಂಜಯರವರು ಮಾತನಾಡಿ ಕಾಳು ಮೆಣಸಿನಲ್ಲಿ ಬೆಳೆಯ ನಿರ್ವಹಣೆ,

ಶೀಘ್ರ ಸೊರಗು ರೋಗದ ನಿರ್ವಹಣೆಯ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದರು. ನಂತರ ಕೀಟ ಶಾಸ್ತ್ರಜ್ಞರಾದ, ಡಾ. ಸಚಿನ್.ಯು.ಎಸ್ ರವರು ಮಾತನಾಡಿ, ಶೀಘ್ರ ಸೊರಗು ರೋಗದ ಲಕ್ಷಣ ಹಾಗೂ ಅದರ ಸಮಗ್ರ ನಿರ್ವಹಣೆಯಲ್ಲಿ ಟ್ರೈಕೋಡರ್ಮಾ, ಸೂಕ್ಷ್ಮಾಣು ಜೀವಿಗಳ ಸಮ್ಮಿಶ್ರಣ, ಪೊಟ್ಯಾಶಿಯಂ ಫಾಸ್ಪೋನೇಟ್ ಬೇವಿನ ಹಿಂಡಿಯ ಬಳಕೆಯ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದರು. ಕಾರ್ಯಕ್ರಮದ ಕೊನೆಯಲ್ಲಿ, ಕೇಂದ್ರದ ವತಿಯಿಂದ ಆಯ್ದ ರೈತರಿಗೆ ಶೀಘ್ರ ಸೊರಗು ರೋಗದ ನಿರ್ವಹಣೆಯ ನಿರ್ಣಾಯಕ ಪರಿಕರಗಳನ್ನು ವಿತರಿಸಿ, ಟ್ರೈಕೋಡರ್ಮಾದ ಬಳಕೆಯ ಪದ್ಧತಿ ಪ್ರಾತ್ಯಕ್ಷಿಕೆಯನ್ನು ರೈತರಿಂದಲೇ ಮಾಡಿಸಲಾಯಿತು.

ಇದೇ ಸಂದರ್ಭದಲ್ಲಿ ರೈತರ ಬೇಡಿಕೆಯ ಮೇರೆಗೆ ಕೊಕ್ಕೊ ಮತ್ತು ಗೇರು ಬೆಳೆಯಲ್ಲಿ ಚೌಟನೆ (Pruning) ಮಾಡುವ ಕ್ರಮವನ್ನು ಪದ್ಧತಿ ಪ್ರಾತ್ಯಕ್ಷಿಕೆ ಮೂಲಕ ರೈತರಿಗೆ ತೋರಿಸಲಾಯಿತು. ನಂತರ ಸದಾನಂದ ನಾಯ್ಕರವರು ಸಮಗ್ರ ಕೃಷಿ ಪದ್ಧತಿಯಲ್ಲಿ ಕಾಡುಪ್ರಾಣಿಗಳ ತಡೆಗೆ ಅಳವಡಿಸಿಕೊಂಡ ಕಂದಕಗಳ ಮಾದರಿ, ಹೈನುಗಾರಿಕೆ, ಬಯೋಡೈಜೆಸ್ಟರ್, ಸ್ಲರಿ ಘಟಕ, ಗೋಬರ್ ಗ್ಯಾಸ್ ಘಟಕ ಹಾಗೂ ವಿವಿಧ ಬೆಳೆಗಳ ತಾಕುಗಳಿಗೆ ಭೇಟಿ ನೀಡಿ ರೈತರು ಹರ್ಷ ವ್ಯಕ್ತಪಡಿಸಿದರು.

ಮಾಡಹಾಗಲ ತರಬೇತಿ ಕಾರ್ಯಕ್ರಮ

ಕೃಷಿ ಮತ್ತು ತೋಟಗಾರಿಕೆ ವಿಶ್ವ ವಿದ್ಯಾಲಯ, ಶಿವಮೊಗ್ಗ, ಐ.ಸಿ.ಎ.ಆರ್. ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರ ಇವರ ಸಂಯುಕ್ತ ಆಶ್ರಯದಲ್ಲಿ ಮಾಡಹಾಗಲ ತರಬೇತಿ ಕಾರ್ಯಕ್ರಮವನ್ನು ಪೆರ್ಡೂರು ಗ್ರಾಮದ ಶ್ರೀ ಅಶ್ವಥ್ ಹೆಬ್ಬಾರ್ ರವರ ಮಾಡಹಾಗಲ ತೋಟದಲ್ಲಿ ಏರ್ಪಡಿಸಲಾಗಿತ್ತು. ಇಲ್ಲಿಯೇ ಏರ್ಪಡಿಸಲು ಕಾರಣ ಶ್ರೀಯುತ ಅಶ್ವಥ್ ಹೆಬ್ಬಾರ್ ರವರು ಕಳೆದ ವರ್ಷ ಕೃಷಿ ವಿಜ್ಞಾನ ಕೇಂದ್ರ ಏರ್ಪಡಿಸಿದ ಮಡಹಾಗಲ ಪ್ರಾತ್ಯಕ್ಷಿಕೆಯನ್ನು ತಮ್ಮ ತೋಟದಲ್ಲಿ ಅನುಷ್ಠಾನ ಮಾಡಿ ಇಡೀ ಜಿಲ್ಲೆಯಲ್ಲಿ ವೈಜ್ಞಾನಿಕ ಮಡಹಾಗಲದ ಬೆಳೆಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುತ್ತಾರೆ. ಮತ್ತೊಂದು ಕಾರಣವೆಂದರೆ ಅಶ್ವಥ್ ರವರ ಕೃಷಿಯಲ್ಲಿ ಅಗಾದ ಆಸಕ್ತಿಯಿಂದಾಗಿ ಅವರೆ ಸ್ವತಃ ನಮ್ಮನ್ನು ಸಂಪರ್ಕಿಸಿ ಬೆಳೆಯ ಬಗ್ಗೆ ಮಾಹಿತಿ ಪಡೆದು ಇದು ಎಲ್ಲಿ ಬೆಳೆದಿದ್ದಾರೆ ಎಂದು ತಿಳಿದು ಆ ಮಾಹಿತಿಯಂತೆ ಚಟ್ಟಳ್ಳಿಯ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಗೆ ಬೇಟಿ ನೀಡಿ ಅಲ್ಲಿಯೂ ಕೆಲವು ಪ್ರಾಯೋಗಿಕ ಮಾಹಿತಿಯನ್ನು ಪಡೆದು ಆ ನಂತರ ಬರುವಾಗ ಕೆಲವಾರು ಗಿಡಗಳನ್ನು ತಂದು ನೆಟ್ಟಿರುತ್ತಾರೆ. ಇವರ ಅಗಾದವಾದ ಆಸಕ್ತಿಯನ್ನು ಕಂಡು ಕೃಷಿ ವಿಜ್ಞಾನ ಕೇಂದ್ರದಿಂದ

ಬ್ರಹ್ಮಾವರ ಇವರು ಮಾತನಾಡುತ್ತ ಭಾರತವು ಅತ್ಯಂತ ಹೆಚ್ಚು ಹಾಲು ಉತ್ಪಾದನೆ ಮಾಡುವ ದೇಶ ಎಂದು ತಿಳಿಸಿದರು. ಹೈನುಗಾರಿಕೆ ಎಷ್ಟೋ ಜನರಿಗೆ ತಮ್ಮ ಬದುಕು ರೂಪಿಸಿಕೊಳ್ಳಲು ಸಹಾಯ ಆಗಿದೆ ಎಂದರು ಹಾಗೆ ಹಾಲು ಉತ್ಪಾದನೆ ಬೆಳೆದು ಬಂದ ಹಾದಿಯನ್ನು ಸಂಕ್ಷಿಪ್ತವಾಗಿ ತಿಳಿಸಿದರು.

ಆನ್ಲೈನ್ ಮುಖ್ಯ ಅತಿಥಿಗಳಾದ ಶ್ರೀ ಗೋಪಾಲ ಪೂಜಾರಿ, ಸದಸ್ಯರು, ವೈಜ್ಞಾನಿಕ ಸಲಹಾ ಸಮಿತಿ, ಕೆ.ವಿ.ಕೆ, ಬ್ರಹ್ಮಾವರ ಇವರು ಮಾತನಾಡುತ್ತ ರೈತನಿಗೆ ಕಲಿಕೆ ಎನ್ನುವುದು ಯಾವತ್ತಿಗೂ ಮುಗಿಯದ ವಿದ್ಯೆ ಎಂದರು.

ಆನ್ಲೈನ್ ಮುಖ್ಯ ಅತಿಥಿಗಳಾದ ಶ್ರೀ ಜ್ಞಾನದೇವ್, ಪ್ರಗತಿಪರ ಕೃಷಿಕರು, ಸಾಗೂರು ಅವರು ಮಾತಾನಾಡುತ್ತ ಭತ್ತದ ಬೆಳೆ ಯಾವತ್ತಿಗೂ ಬತ್ತಿ ಹೋಗದ ಬೆಳೆ ಎಂದರು.

ಶ್ರೀ ಶ್ರೀನಿವಾಸ್ ಹೆಚ್. ಹುಲಕೋಟಿ, ವಿಜ್ಞಾನಿಗಳು (ಮೀನುಗಾರಿಕೆ), ಕೆ.ವಿ.ಕೆ, ಬ್ರಹ್ಮಾವರ ಸರ್ವರನ್ನು ಸ್ವಾಗತಿಸಿದರು.
ಡಾ. ಎನ್. ಈ. ನವೀನ್, ವಿಜ್ಞಾನಿಗಳು (ಬೇಸಾಯ ಶಾಸ್ತ್ರ), ಕೆ.ವಿ.ಕೆ, ಬ್ರಹ್ಮಾವರ, ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು.

ಹಾಲು ಬೆಂಡೆಯಲ್ಲಿ ಹಳದಿ ನಂಜು ರೋಗದ ನಿರ್ವಹಣೆಯ ಮುಂಚೂಣಿ ಪ್ರಾತ್ಯಕ್ಷಿಕೆ

ಕೃಷಿ ವಿಜ್ಞಾನ ಕೇಂದ್ರ ಬ್ರಹ್ಮಾವರ ಇವರ ವತಿಯಿಂದ, ಕೊಕ್ಕರ್ಣೆಯ ಸಾಸ್ತಾವು ಗ್ರಾಮದ ದೇವಣ್ಣ ನಾಯ್ಕರವರ ಮನೆಯ ವಠಾರದಲ್ಲಿ ದಿನಾಂಕ 26.11.2019 ರಂದು ನಡೆದ ಹಾಲು ಬೆಂಡೆಯಲ್ಲಿ ಹಳದಿ ನಂಜುರೋಗದ ನಿರ್ವಹಣೆಯ ಕೃಷಿ ವಿಜ್ಞಾನ ಕೇಂದ್ರ ಬ್ರಹ್ಮಾವರ ಇವರ ವತಿಯಿಂದ, ಕೊಕ್ಕರ್ಣೆಯ ಸಾಸ್ತಾವು ಗ್ರಾಮದ ದೇವಣ್ಣ ನಾಯ್ಕರವರ ಮನೆಯ ವಠಾರದಲ್ಲಿ ದಿನಾಂಕ 26.11.2019 ರಂದು ನಡೆದ ಹಾಲು ಬೆಂಡೆಯಲ್ಲಿ ಹಳದಿ ನಂಜುರೋಗದ ನಿರ್ವಹಣೆಯ ಮುಂಚೂಣಿ ಪ್ರಾತ್ಯಕ್ಷಿಕೆಯ ಕಾರ್ಯಕ್ರಮದಲ್ಲಿ ಕೇಂದ್ರದ ವಿಜ್ಞಾನಿಗಳಾದ ಚೈತನ್ಯ ಹೆಚ್.ಎಸ್. ರವರು ಮಾತನಾಡಿ ಬೆಂಡೆ ಹಾಗೂ ಇತರೆ ತರಕಾರಿ ಬೆಳೆಗಳ ಬೇಸಾಯ ಕ್ರಮದ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದರು. ನಂತರ ಕೀಟಶಾಸ್ತ್ರಜ್ಞರಾದ ಡಾ. ಸಚಿನ್.ಯು.ಎಸ್ ರವರು ಮಾತನಾಡಿ, ಬೆಂಡೆ ಬೆಳೆಯಲ್ಲಿ, ಹಳದಿ ನಂಜುರೋಗದ ಸಂಪೂರ್ಣ ಮಾಹಿತಿಯೊಂದಿಗೆ ಅದರ ಸಮಗ್ರ ನಿರ್ವಹಣೆಯ ವಿಧಾನಗಳಾದ, ಬೀಜೋಪಚಾರ, ಸಸಿ ಮಡಿಗಳ ತಯಾರಿಕೆ, ಹಳದಿ ಹಾಗೂ ನೀಲಿ ಅಂಟುಬಲೆಗಳ ಅಳವಡಿಕೆ ಬೇವಿನ ಉತ್ಪನ್ನಗಳಾದ, ಹಿಂಡಿ ಮತ್ತು ಬೇವಿನ ಎಣ್ಣೆಯ ಬಳಕೆಯ ಜೊತೆಗೆ ಕೀಟನಾಶಕಗಳ ಸಮರ್ಪಕ ಬಳಕೆಯ ಬಗ್ಗೆ ಮಾಹಿತಿ ನೀಡಿದರು. ಹಳದಿ ನಂಜು ರೋಗವು ಬಿಳಿನೊಣ ಎಂಬ ಕೀಟದಿಂದ ಹರಡುವುದರಿಂದ ಕೀಟದ ಹತೋಟಿಯು ಬಹಳ ಮುಖ್ಯ ಎಂದು ರೈತರಿಗೆ ವಿವರಣೆ ನೀಡಿದರು. ಕಾರ್ಯಕ್ರಮದ ಕೊನೆಯಲ್ಲಿ ಕೇಂದ್ರದ ವತಿಯಿಂದ ಆಯ್ದ ರೈತರಿಗೆ ಹಳದಿ ನಂಜುರೋಗದ ನಿರ್ವಹಣೆಯ ಪರಿಕರಗಳನ್ನು ವಿತರಿಸಿ, ಪ್ರಾತ್ಯಕ್ಷಿಕೆಯನ್ನು ಮಾಡಲಾಯಿತು.

ವಸಂತನಾಯ್ಕ, ಗ್ರಾಮ ಪಂಚಾಯತ್ ಸದಸ್ಯರು, ಕೊಕ್ಕರ್ಣೆ ಇವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಸುರೇಶ್ ನಾಯ್ಕರವರು ಕಾರ್ಯಕ್ರಮವನ್ನು ನಿರೂಪಿಸಿದರು.

ಕಲ್ಲಂಗಡಿ ಬೆಳೆಯಲ್ಲಿ ರಸ ಹೀರುವ ಕೀಟಗಳು ಮತ್ತು ಸುಳಿ ನಂಜು ರೋಗದ ನಿರ್ವಹಣೆಯ ಮುಂಚೂಣಿ ಪ್ರಾತ್ಯಕ್ಷಿಕೆ

ಕೃಷಿ ವಿಜ್ಞಾನ ಕೇಂದ್ರ ಬ್ರಹ್ಮಾವರ, ಉಡುಪಿ ಜಿಲ್ಲಾ ಪಂಚಾಯತ್, ಕೃಷಿ ಇಲಾಖೆ ಕುಂದಾಪುರ, ರೈತಸಂಪರ್ಕ ಕೇಂದ್ರ, ಬೈಂದೂರು ಹಾಗೂ ಖಂಬದ ಕೋಣೆ ರೈತರ ಸೇವಾ ಸಹಕಾರಿ ಸಂಘ ನಿ. ಉಪ್ಪುಂದ ಹಾಗೂ ಆತ್ಮ ಯೋಜನೆಯಡಿಯಲ್ಲಿ, ರೈತಸಿರಿ ಸಭಾಭವನ, ಉಪ್ಪುಂದದಲ್ಲಿ ನಡೆದ ಕಲ್ಲಂಗಡಿ ಬೇಸಾಯ ತರಬೇತಿ ಹಾಗೂ ಕಲ್ಲಂಗಡಿ ಬೆಳೆಯಲ್ಲಿ ರಸಹೀರುವ ಕೀಟಗಳು ಮತ್ತು ಸುಳಿ ನಂಜುರೋಗದ ನಿರ್ವಹಣೆಯ ಮುಂಚೂಣಿ ಪ್ರಾತ್ಯಕ್ಷಿಕೆಯಲ್ಲಿ ಕೇಂದ್ರದ ವಿಜ್ಞಾನಿಗಳಾದ ಡಾ.ಸಚಿನ್.ಯು.ಎಸ್.ರವರು ಮಾತನಾಡಿ, ಕಲ್ಲಂಗಡಿ ಬೆಳೆಯ ಬೇಸಾಯ ಕ್ರಮದ ಸಂಪೂರ್ಣ ಮಾಹಿತಿಯೊಂದಿಗೆ, ಅದರಲ್ಲಿ ವಿವಿಧ ಜೈವಿಕ ಗೊಬ್ಬರಗಳ ಬಳಕೆ, ಕೀಟ ಮತ್ತು ರೋಗದ ಹತೋಟಿಗಾಗಿ ವಿವಿಧ ಬಲೆಗಳ, ಜೊತೆಗೆ ವಿವಿಧ ಔಷಧಿಗಳ ಬಳಕೆಯ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದರು. ಇನ್ನೋರ್ವ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ. ಹೆಚ್.ರಂಜನ್ ಶೆಟ್ಟಿ, ಮಾಜಿ ಪ್ರಾದೇಶಿಕ ನಿರ್ದೇಶಕರು, ನಾಮಧಾರಿ ಸೀಡ್ಸ್ ಪ್ರೈ.ಲಿ. ಬೆಂಗಳೂರು ಇವರು ಮಾತಾನಾಡಿ, ಸೂಕ್ತ ಬೀಜಗಳ ಆಯ್ಕೆ ಮತ್ತು ಹವಾಮಾನವರಿಯ ಜೊತೆಗೆ ರಸಗೊಬ್ಬರಗಳ ಬಳಕೆಯ ಕುರಿತಾಗಿ ಸಂಪೂರ್ಣ ಮಾಹಿತಿ ನೀಡಿದರು. ಶ್ರೀ ಸಂಜೀವ ನಾಯ್ಕ, ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು, ಕುಂದಾಪುರ ಇವರು ಮಾತನಾಡಿ, ಕಲ್ಲಂಗಡಿ ಬೆಳೆಯ ಮಹತ್ವ ಮತ್ತು ಸರಕಾರದ ವತಿಯಿಂದ ಬೆಳೆಗೆ ಸಿಗುವ ಅನುದಾನದ ಕುರಿತಾಗಿ ಮಾಹಿತಿ ನೀಡಿದರು. ಶ್ರೀ ಪುಂಡರೀಕ ಮದ್ಯಸ್ಥ, ಪ್ರಗತಿಪರ ಕೃಷಿಕರು, ಕಿರಿಮಂಜೇಶ್ವರರವರು ಕಲ್ಲಂಗಡಿ ಬೆಳೆಯಲ್ಲಿ ಸಾವಯವ ಕೃಷಿಯ ಮಹತ್ವದ ಬಗ್ಗೆ ವಿವರಣೆ ನೀಡಿದರು.

ಶ್ರೀಮತಿ ದುರ್ಗಮ್ಮ, ಅಧ್ಯಕ್ಷರು ಗ್ರಾಮ ಪಂಚಾಯತ್ ಉಪ್ಪುಂದ ಇವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು, ಶ್ರೀ ಸತೀಶ್ ಬಟ್ವಾಡಿ, ಸದಸ್ಯರು ಜಿಲ್ಲಾ ಪಂಚಾಯತ್ ಸದಸ್ಯರು, ಉಡುಪಿ, ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಪ್ರಮೀಳಾ ದೇವಾಡಿಗ, ಸದಸ್ಯರು, ತಾಲೂಕು ಪಂಚಾಯತ್ ಕುಂದಾಪುರ, ಶ್ರೀಮತಿ ಸಿಂಗಾರಿ ಶೆಟ್ಟಿ, ಉಪಾಧ್ಯಕ್ಷರು ಗ್ರಾಮ ಪಂಚಾಯತ್ ಉಪ್ಪುಂದ, ಶ್ರೀಮತಿ ರೂಪ ಜೆ.ಮಾಡ, ಸಹಾಯಕ ಕೃಷಿ ನಿರ್ದೇಶಕರು, ಕುಂದಾಪುರ, ಶ್ರೀ.ಎಸ್. ಪ್ರಕಾಶ್ಚಂದ್ರ ಶೆಟ್ಟಿ, ಅಧ್ಯಕ್ಷರು ಖಂಬದಕೋಣೆ, ರೈತರ ಸೇವಾ ಸಹಕಾರಿ ಸಂಘ ನಿ. ರವರು ಉಪಸ್ಥಿತರಿದ್ದರು ಶ್ರೀ ಈಶ್ವರ್ ನಾಯಕ್ ರವರು ಕಾರ್ಯಕ್ರಮದ ನಿರೂಪಣೆ ಮಾಡಿದರು.

ಸಂಪಾದಕರು: ಡಾ. ಬಿ. ಧನಂಜಯ
ಸಹ ಸಂಪಾದಕರು: ಶ್ರೀ ಚೈತನ್ಯ ಹೆಚ್. ಎಸ್., ಡಾ. ಎನ್. ಈ. ನವೀನ್, ಡಾ. ಜಯ ಪ್ರಕಾಶ್ ಆರ್., ಶ್ರೀ ಶ್ರೀನಿವಾಸ ಹೆಚ್. ಹುಲಕೋಟಿ, ಡಾ. ಸಚಿನ್ ಯು. ಎಸ್.
ಅಕ್ಷರ ಜೋಡಣೆ : ಶ್ರೀಮತಿ ಶೈಲಜ ಮತ್ತು ಶ್ರೀಮತಿ ಸುಷ್ಮಾ
ಪ್ರಕಾಶಕರು: ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರ, ಉಡುಪಿ-576213
ದೂರವಾಣಿ ಸಂಖ್ಯೆ: 0820-2563923, Email: kvkudupi@gmail.com, udupikvk@gmail.com